A – 2015

Subject Code : 30 (NS)

# ACCOUNTANCY

(Kannada and English Versions)

Time : 3 Hours 15 Minutes] [Total No. of questions : 27] [Max. Marks :100

## (Kannada Version)

### ಭಾಗ - ಎ

ಯಾವುದಾದರೂ ಏಳು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು : (7×2=14)

1. ಸವಕಳಿಯ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.

2. ಸ್ಥಿರ ಬಂಡವಾಳ ಪದ್ಧತಿ ಎಂದರೇನು ?

3. ತ್ಯಾಗದ ಪ್ರಮಾಣ ಎಂದರೇನು ?

4. ನಿವೃತ್ತಿ ಹೊಂದುವ ಪಾಲುಗಾರನ ಬಾಕಿ ಮೊತ್ತ ಚುಕ್ತಗೊಳಿಸಲು ಅನುಸರಿಸುವ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ.

5. ಸಂಸ್ಥೆಯ ವಿಸರ್ಜನೆಯಲ್ಲಿ ಪಾಲುಗಾರನ ಸಾಲದ ಖಾತೆಯನ್ನು ಮುಕ್ತಾಯಗೊಳಿಸಲು ಬರೆಯುವ ರೋಜು ದಾಖಲೆಯನ್ನು ನೀಡಿ.

6. ಅಧಿಕವಂತಿಕೆ ಎಂದರೇನು ?

7. ಮಧ್ಯಂತರ ಲಾಭಾಂಶದ ಅರ್ಥವನ್ನು ನೀಡಿ.

8. ಹಣಕಾಸು ಪಟ್ಟಿ ವಿಶ್ಲೇಷಣೆಯ ಯಾವುದಾದರೂ ಎರಡು ಉಪಯೋಗಗಳನ್ನು ತಿಳಿಸಿ.

9. ಲಾಭರಹಿತ ವ್ಯಾಪಾರಿ ಸಂಸ್ಥೆಗಳು ಎಂದರೇನು ?

10. ಡಾಟಾಬೇಸ್ ಮೇನೇಜ್‌ಮೆಂಟ್ ಸಿಸ್ಟಮ್‌ನ ಯಾವುದಾದರೂ ಎರಡು ಅನಾನುಕೂಲಗಳನ್ನು ತಿಳಿಸಿ.

P.T.O.

## ಭಾಗ - ಬಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು : **(4×5=20)**

11. ಪ್ರಥಮ್ ಮತ್ತು ಚೇತನ್ ಪಾಲುಗಾರರಾಗಿದ್ದು, ಲಾಭ-ನಷ್ಟವನ್ನು 3 : 2 ರ ಪ್ರಮಾಣದಂತೆ ಹಂಚಿಕೊಳ್ಳುತ್ತಿದ್ದು, ಅನುಕ್ರಮವಾಗಿ ₹ 60,000 ಮತ್ತು ₹ 40,000 ಬಂಡವಾಳವನ್ನು ದಿನಾಂಕ 1-4-2013ರಲ್ಲಿ ಹೊಂದಿರುತ್ತಾರೆ. ಪಾಲುಗಾರಿಕೆ ಒಪ್ಪಂದದ ಪ್ರಕಾರ ಈ ಕೆಳಕಂಡವುಗಳನ್ನು ಪಡೆಯುತ್ತಾರೆ.

    a) ಪಾಲುಗಾರರ ಬಂಡವಾಳಕ್ಕೆ ವಾರ್ಷಿಕ ಶೇ. 6ರಂತೆ ಬಡ್ಡಿ

    b) ಪಾಲುಗಾರರ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 5ರಂತೆ ಬಡ್ಡಿ

    c) ಚೇತನ್‌ರವರಿಗೆ ವರ್ಷದ ಮೊದಲ ಆರು ತಿಂಗಳು ₹ 500 ಪ್ರತಿ ತಿಂಗಳಿಗೆ ಮತ್ತು ಉಳಿದ ಅವಧಿಗೆ ₹ 1,000 ಪ್ರತಿ ತಿಂಗಳು ಸಂಬಳ ನೀಡಲಾಗುತ್ತದೆ.

    d) ಸ್ವಂತ ವೆಚ್ಚಕ್ಕಾಗಿ ಪ್ರಥಮ್ ₹ 8,000 ಮತ್ತು ಚೇತನ್ ₹ 10,000 ವನ್ನು ಬಳಸಿದ್ದಾರೆ ಮತ್ತು ಇದರ ಬಡ್ಡಿ ಅನುಕ್ರಮವಾಗಿ ₹ 400 ಮತ್ತು ₹ 500 ಆಗಿದೆ.

    ಮೇಲಿನ ಹೊಂದಾಣಿಕೆಗಳನ್ನು ಮಾಡುವ ಪೂರ್ವದಲ್ಲಿ ಸಂಸ್ಥೆಯ ಲಾಭವು ₹ 24,100 ಆಗಿದೆ.

    ಲಾಭ-ನಷ್ಟದ ವಿನಿಯೋಗ ಖಾತೆಯನ್ನು 31-3-2014ರ ಅಂತ್ಯಕ್ಕೆ ತಯಾರಿಸಿ.

12. ರಮೇಶ್ ಮತ್ತು ಸುರೇಶ್‌ರವರು ಪಾಲುಗಾರರಾಗಿದ್ದು ಲಾಭ-ನಷ್ಟವನ್ನು 3 : 2 ರಂತೆ ಹಂಚಿಕೊಳ್ಳುತ್ತಿದ್ದರು. ಅವರು ಸತೀಶನನ್ನು $1/5$ ನೇ ಭಾಗಕ್ಕೆ ಪಾಲುಗಾರಿಕಾ ಸಂಸ್ಥೆಗೆ ಸೇರಿಸಿಕೊಂಡರು.

    ಎಲ್ಲಾ ಪಾಲುಗಾರರ ಹೊಸ ಲಾಭದ ಪ್ರಮಾಣವನ್ನು ಕಂಡುಹಿಡಿಯಿರಿ.

13. ಅನಿಲ್, ಸುನಿಲ್ ಮತ್ತು ರಾಹುಲ್ ಪಾಲುಗಾರರಾಗಿದ್ದು, ಲಾಭ-ನಷ್ಟದ ಪ್ರಮಾಣ 3 : 2 : 1 ರಂತೆ ಇದೆ. ದಿನಾಂಕ 1-4-2014ರಂದು ಅವರು ಅನುಕ್ರಮವಾಗಿ ₹ 70,000, ₹ 90,000 ಮತ್ತು ₹ 60,000 ಬಂಡವಾಳವನ್ನು ಹೊಂದಿರುತ್ತಾರೆ.

    ದಿನಾಂಕ : 31-12-2014ರಂದು ಅನಿಲ್ ನಿಧನ ಹೊಂದಿದ್ದು, ಪಾಲುಗಾರಿಕೆಯ ಒಪ್ಪಂದ ಈ ಕೆಳಗಿನ ಅಂಶಗಳನ್ನೊಳಗೊಂಡಿದೆ.

    a) ಅನಿಲ್ ಬಂಡವಾಳದ ಮೇಲೆ ಶೇ. 8ರಂತೆ ವಾರ್ಷಿಕ ಬಡ್ಡಿ.

    b) ಅನಿಲ್‌ನ ಮಾಸಿಕ ಸಂಬಳ ₹ 2,000.

    c) ಹಿಂದಿನ ವರ್ಷದ ಲಾಭದ ಆಧಾರದ, ಮರಣ ಹೊಂದಿದ ದಿನಾಂಕದವರೆಗಿನ ಸಂಭವನೀಯ ಲಾಭದ ಪಾಲು 2013-2014ರ ಸಂಸ್ಥೆಯ ಲಾಭ ₹ 24,000.

    d) ಅನಿಲ್‌ರವರ ಕೀರ್ತಿಮೌಲ್ಯದ ಭಾಗ ₹ 12,000.

    ಅನಿಲ್‌ರವರ ವಾರಸುದಾರರಿಗೆ ನೀಡಬೇಕಾದ ಮೊತ್ತವನ್ನು ಅನಿಲ್‌ರವರ ಬಂಡವಾಳ ಖಾತೆ ತೆರೆದು ಕಂಡುಹಿಡಿಯಿರಿ.

14. ಕಾವೇರಿ ಕಂ. ನಿಯಮಿತ, ₹ 250 ಬೆಲೆಯ 5,000 5%ರ ಸಾಲಪತ್ರಗಳನ್ನು, ಪ್ರತಿ ಸಾಲಪತ್ರಕ್ಕೆ ₹ 50ರಂತೆ ಸೋಡಿಗೆ ಬಿಡುಗಡೆ ಮಾಡಿದೆ. ಸದರಿ ಹಣವನ್ನು ಈ ಕೆಳಕಂಡಂತೆ ಪಾವತಿಸಲು ಸೂಚಿಸಿದೆ.

₹ 50 ಪ್ರತಿ ಸಾಲಪತ್ರಕ್ಕೆ ಅರ್ಜಿ ಹಣ

₹ 100 ಪ್ರತಿ ಸಾಲಪತ್ರಕ್ಕೆ ಹಂಚಿಕೆ ಹಣ

₹ 50 ಪ್ರಥಮ ಹಾಗೂ ಅಂತಿಮ ಕರೆ ಹಣ

ಎಲ್ಲಾ ಸಾಲಪತ್ರಗಳು ವಂತಿಕೆಯಾಗಿ ಹಂಚುವಿಕೆಯ ಹಂತದವರೆವಿಗೂ ಹಣ ಅಧಿಕೃತವಾಗಿ ಸ್ವೀಕರಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ರೋಜು ದಾಖಲೆಗಳನ್ನು ಬರೆಯಿರಿ.

15. ಕರ್ನಾಟಕ ಕಂ. ನಿಯಮಿತ, ದಿನಾಂಕ: 31-3-2014ರಂದು ಈ ಕೆಳಕಂಡವುಗಳನ್ನು ಹೊಂದಿದೆ.

| | |
|---|---|
| ಚಾಲ್ತಿ ಆಸ್ತಿ | ₹ 2,40,000 |
| ಚಾಲ್ತಿ ಜವಾಬ್ದಾರಿಗಳು | ₹ 60,000 |
| ದ್ರವ್ಯ ಆಸ್ತಿಗಳು | ₹ 1,20,000 |

ಕಂಡುಹಿಡಿಯಿರಿ :

i) ಚಾಲ್ತಿ ಅನುಪಾತ

ii) ದ್ರವ್ಯ ಅನುಪಾತ.

16. ಈ ಕೆಳಕಂಡ ಖಾತಾ ಶಿಲ್ಕುಗಳಿಂದ ಭರಣಿ ಚಾರಿಟಬಲ್ ಟ್ರಸ್ಟ್‌ನಲ್ಲಿ ಸ್ವೀಕೃತಿ ಮತ್ತು ಪಾವತಿ ಖಾತೆಯನ್ನು ತೆರೆಯಿರಿ :

| | ₹ | | ₹ |
|---|---|---|---|
| ಕೈಯಲ್ಲಿರುವ ನಗದು | 6,000 | ವಂತಿಗೆಗಳು ಪಡೆದದ್ದು | 12,000 |
| ನಿಯತಕಾಲಿಕಗಳ ವೆಚ್ಚ | 600 | ಬಾಡಿಗೆ ನೀಡಿದ್ದು | 5,000 |
| ಪೀಠೋಪಕರಣ ಖರೀದಿ | 19,000 | ಸಂಬಳ ನೀಡಿದ್ದು | 4,000 |
| ಮೃತ್ಯುದತ್ತಿ ಪಡೆದದ್ದು | 18,000 | ವಿದ್ಯುತ್ ಖರ್ಚು | 800 |
| ಅಂಚೆ ವೆಚ್ಚ | 200 | | |

17. ಡಾಟಾ ಪ್ರೋಸೆಸಿಂಗ್ ಸೈಕಲ್‌ನ ಹಂತಗಳನ್ನು ವಿವರಿಸಿ.

## ಭಾಗ - ಸಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು : (4x14=56)

18. ಪುಷ್ಪಕ್ ಕಂ. ನಿಯಮಿತದಲ್ಲಿ ಕೆಳಕಂಡ ವಿವರಗಳಿಂದ ಏಕರೂಪ ಪದ್ಧತಿಯಂತೆ ವಾರ್ಷಿಕ ಶೇ.10ರಂತೆ ಸವಕಳಿಯನ್ನು ತೆಗೆದು, ಪ್ರತಿ ವರ್ಷ 31ನೇ ಮಾರ್ಚ್ ಅಂತ್ಯವಾಗುವಂತೆ ನಾಲ್ಕು ವರ್ಷಕ್ಕೆ ಯಂತ್ರೋಪಕರಣ ಖಾತೆ ಮತ್ತು ಸವಕಳಿ ಖಾತೆಯನ್ನು ತೆರೆಯಿರಿ.

    a) "X" ಯಂತ್ರವನ್ನು 1-4-2009 ರಂದು ₹ 50,000 ವೆಚ್ಚಕ್ಕೆ ಖರೀದಿಸಿ, ಹೆಚ್ಚುವರಿ ₹ 10,000 ಸ್ಥಾಪನೆಗಾಗಿ ವ್ಯಯಿಸಲಾಗಿದೆ.

    b) "Y" ಯಂತ್ರವನ್ನು 30-6-2010 ರಂದು ₹ 40,000 ವೆಚ್ಚಕ್ಕೆ ಖರೀದಿಸಲಾಗಿದೆ.

    c) "X" ಯಂತ್ರವನ್ನು 30-9-2011 ರಂದು ₹ 42,400ಕ್ಕೆ ಮಾರಾಟ ಮಾಡಲಾಗಿದೆ.

19. ಶ್ರೀಕಾಂತ್, ಗಿರೀಶ್ ಮತ್ತು ಮಂಜು ಲಾಭ-ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು. 31-3-2014 ರಲ್ಲಿ ಅವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

**ದಿ : 31-3-2014ರ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 30,000 | ನಗದು | 24,000 |
| ಕೊಡತಕ್ಕ ಹುಂಡಿಗಳು | | 20,000 | ಬರತಕ್ಕ ಹುಂಡಿಗಳು | 28,000 |
| ಬ್ಯಾಂಕ್ ಮೀರೆಳೆತ | | 25,000 | ದಾಸ್ತಾನು | 36,000 |
| ಕಾಯ್ದಿರಿಸಿದ ನಿಧಿ | | 15,000 | ಹೂಡಿಕೆಗಳು | 9,000 |
| **ಬಂಡವಾಳಗಳು** | | | ಋಣಿಗಳು | 20,000 |
| ಶ್ರೀಕಾಂತ್ | 60,000 | | ಪೀಠೋಪಕರಣ | 25,000 |
| ಗಿರೀಶ್ | 50,000 | | ಯಂತ್ರಗಳು | 32,000 |
| ಮಂಜು | 30,000 | 1,40,000 | ಕಟ್ಟಡಗಳು | 50,000 |
| | | | ಲಾಭ-ನಷ್ಟದ ಖಾತೆ | 6,000 |
| | | **2,30,000** | | **2,30,000** |

ಮಂಜುರವರು ದಿ: 1-4-2014ರಂದು ಸಂಸ್ಥೆಯಿಂದ ನಿವೃತ್ತಿ ಹೊಂದಿದರು. ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಯಿತು.

a) ಸಂಸ್ಥೆಯ ನಿಗದಿತ ಕೀರ್ತಿಮೌಲ್ಯ ₹ 18,000 (ಸಂಸ್ಥೆಯಲ್ಲಿಯೇ ಉಳಿಸಿಕೊಳ್ಳಲಾಗಿದೆ).

b) ಋಣಿಗಳ ಮೇಲೆ ಶೇ. 5 ರಂತೆ ಸಂಶಯಾಸ್ಪದ ಸಾಲದ ಮೀಸಲನ್ನು ತೆಗೆಯಿರಿ.

c) ದಾಸ್ತಾನಿನ ಬೆಲೆಯನ್ನು ₹ 4,000 ಹೆಚ್ಚಿಸಿ.

d) ಯಂತ್ರಗಳು ಮತ್ತು ಪೀಠೋಪಕರಣಗಳಿಗೆ ಶೇ. 10 ರಂತೆ ವಾರ್ಷಿಕ ಸವಕಳಿಯನ್ನು ತೆಗೆಯಿರಿ.

**ತಯಾರಿಸಿ :**

i) ಪುನರ್‌ಮೌಲ್ಯ ಖಾತೆ

ii) ಕೀರ್ತಿ ಮೌಲ್ಯ ಖಾತೆ

iii) ಪಾಲುಗಾರರ ಬಂಡವಾಳ ಖಾತೆ

iv) 1-4-2014ರ ಆಢಾವೆ ಪತ್ರಿಕೆ.

20. ಗಿರಿಜಾ ಮತ್ತು ಸುಧಾ ಎಂಬ ಪಾಲುಗಾರರು ಲಾಭ-ನಷ್ಟವನ್ನು 3 : 2 ರಂತೆ ಹಂಚಿಕೊಳ್ಳುತ್ತಿದ್ದರು. ಅವರು ಸಂಸ್ಥೆಯನ್ನು ದಿ : 31-3-2014 ಕ್ಕೆ ವಿಸರ್ಜಿಸಿದರು.

**ದಿ : 31-3-2014ರ ಆಢಾವೆ ಪತ್ರಿಕೆ**

| ಜವಾಬ್ದಾರಿಗಳು | | ₹ | ಆಸ್ತಿಗಳು | | ₹ |
|---|---|---|---|---|---|
| ಸಾಹುಕಾರರು | | 20,000 | ಬ್ಯಾಂಕು | | 15,000 |
| ಕೊಡತಕ್ಕ ಹುಂಡಿಗಳು | | 17,000 | ಋಣಿಗಳು | 25,000 | |
| | | | – ಮೀಸಲು | 1,000 | 24,000 |
| ಗಿರಿಜಾಳ ಸಾಲ | | 21,000 | ಹೂಡಿಕೆಗಳು | | 10,000 |
| ಕಾಯ್ದಿರಿಸಿದ ನಿಧಿ | | 10,000 | ದಾಸ್ತಾನು | | 14,000 |
| ಲಾಭ-ನಷ್ಟದ ಖಾತೆ | | 12,000 | ಪೀಠೋಪಕರಣ | | 16,000 |
| **ಬಂಡವಾಳಗಳು** | | | ಮೋಟಾರು ಕಾರು | | 30,000 |
| ಗಿರಿಜಾ | 44,000 | | ಗಣಕ ಯಂತ್ರ | | 25,000 |
| ಸುಧಾ | 40,000 | 84,000 | ಕಟ್ಟಡಗಳು | | 30,000 |
| | | **1,64,000** | | | **1,64,000** |

**ಲಭ್ಯವಾದ ವಿವರಗಳು :**

a) ಆಸ್ತಿ ವಿಲೇವಾರಿ ಈ ಕೆಳಕಂಡಂತಿದೆ :

| | |
|---|---|
| ಋಣಿಗಳು | ₹ 22,000 |
| ದಾಸ್ತಾನು | ₹ 16,000 |
| ಪೀಠೋಪಕರಣ | ₹ 14,000 |
| ಮೋಟಾರು ಕಾರು | ₹ 25,000 |
| ಕಟ್ಟಡಗಳು | ₹ 40,000 |

b) ಗಿರಿಜಾಳು ಹೂಡಿಕೆಗಳನ್ನು ಪುಸ್ತಕದ ಬೆಲೆಗೆ ತೆಗೆದುಕೊಂಡರು

c) ಸುಧಾಳು ಗಣಕಯಂತ್ರವನ್ನು ಶೇ. 10 ರಷ್ಟು ಕಡಿಮೆ ಬೆಲೆಗೆ ತೆಗೆದುಕೊಂಡರು.

d) ಎಲ್ಲಾ ಜವಾಬ್ದಾರಿಗಳನ್ನು ಪೂರ್ಣ ಚುಕ್ತಾ ಮಾಡಲಾಗಿದೆ.

e) ವಿಲೇವಾರಿ ವೆಚ್ಚ ₹ 2,500

**ತಯಾರಿಸಿ :**

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆ

iii) ಬ್ಯಾಂಕ್ ಖಾತೆ.

21. ವರ್ಷಾ ಕಂ. ನಿಯಮಿತ,ರವರು ₹ 100 ರ ಬೆಲೆಯ 10,000 ಪ್ರಥಮ ಹಕ್ಕಿನ ಶೇರುಗಳನ್ನು, ಪ್ರತಿ ಶೇರಿಗೆ ₹ 5 ರಂತೆ ಪ್ರೀಮಿಯಂಗೆ ಬಿಡುಗಡೆ ಮಾಡಿದೆ.

₹ 10 ಅರ್ಜಿ ಹಣ

₹ 45 ಹಂಚಿಕೆ ಹಣ (ಪ್ರೀಮಿಯಂ ಸೇರಿ)

₹ 30 ಪ್ರಥಮ ಕರೆ ಹಣ

₹ 20 ಅಂತಿಮ ಕರೆ ಹಣ

ಎಲ್ಲಾ ಶೇರುಗಳನ್ನು ಮಾರಾಟ ಮಾಡಲಾಗಿದ್ದು, ಅಂತಿಮ ಕರೆಯಲ್ಲಿ 500 ಶೇರುಗಳ ಹಣ ಸಂದಾಯವಾಗದೆ, ಅವುಗಳನ್ನು ನಿರ್ದೇಶಕರು ಮುಟ್ಟುಗೋಲು ಹಾಕಿಕೊಂಡು, ಪ್ರತಿ ಶೇರಿಗೆ ₹ 90ರಂತೆ ಮರು ಬಿಡುಗಡೆ ಮಾಡಿದ್ದಾರೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯವಿರುವ ರೋಜು ದಾಖಲೆಗಳನ್ನು ಬರೆಯಿರಿ.

22. ಕುಮಾರ್ ಕಂ. ನಿಯಮಿತ, ದಾವಣಗೆರೆಯ ತಾಳೆಪಟ್ಟಿ ದಿ : 31-3-2014 ಕ್ಕೆ ಈ ಕೆಳಕಂಡಂತಿದೆ.

**ದಿ : 31-3-2014ರ ತಾಳೆಪಟ್ಟಿ**

| ಕ್ರ. ಸಂ. | ಖಾತೆಗಳು | ಖರ್ಚು ₹ | ಜಮಾ ₹ |
|---|---|---|---|
| 1 | ಶೇರು ಬಂಡವಾಳ<br>₹ 10 ರ 10,000 ಸಾಮಾನ್ಯ ಶೇರುಗಳು | – | 1,00,000 |
| 2 | ದಾಸ್ತಾನು 1-4-2013 | 75,000 | – |
| 3 | ಖರೀದಿ/ಮಾರಾಟ | 1,05,000 | 2,30,000 |
| 4 | ವಾಪಾಸಾತಿ | 10,000 | 5,000 |
| 5 | ಕೂಲಿ | 15,000 | – |
| 6 | ಸಂಬಳಗಳು | 20,000 | – |
| 7 | ಅನಿಲ ಮತ್ತು ಜಲ | 9,000 | – |

| | | | |
|---|---|---|---|
| 8 | ಇತರೆ ಖರ್ಚು | 1,000 | – |
| 9 | ಪೂರ್ವಭಾವಿ ವೆಚ್ಚಗಳು | 12,000 | – |
| 10 | ದಲ್ಲಾಳಿ | 6,000 | 5,000 |
| 11 | ಋಣಿಗಳು/ಸಾಹುಕಾರರು | 30,000 | 20,000 |
| 12 | ಕೀರ್ತಿಮೌಲ್ಯ | 25,000 | – |
| 13 | ಪೀಠೋಪಕರಣ | 10,000 | – |
| 14 | ಯಂತ್ರ ಮತ್ತು ಸ್ಥಾವರ | 40,000 | – |
| 15 | ಕಟ್ಟಡಗಳು | 50,000 | – |
| 16 | ಲಾಭ-ನಷ್ಟ ವಿನಿಯೋಗ ಖಾತೆ | – | 24,500 |
| 17 | ಕಾಯ್ದಿಟ್ಟ ನಿಧಿ | – | 24,000 |
| 18 | ಕರಡು ಸಾಲ | 2,000 | – |
| 19 | ಹೂಡಿಕೆಗಳು | 25,000 | – |
| 20 | ಹೂಡಿಕೆಗಳಿಂದ ಬಡ್ಡಿ | – | 1,500 |
| 21 | ಬ್ಯಾಂಕಿನಲ್ಲಿ ನಗದು | 20,000 | – |
| 22 | 10% ಸಾಲಪತ್ರಗಳು | – | 50,000 |
| 23 | ಸಾಲಪತ್ರಗಳ ಮೇಲಿನ ಬಡ್ಡಿ | 5,000 | – |
| | **ಮೊತ್ತ** | **4,60,000** | **4,60,000** |

**ಹೊಂದಾಣಿಕೆಗಳು:**

a) ಕಟ್ಟಡಗಳ ಮೇಲೆ ಶೇ. 10 ರಷ್ಟು ಸವಕಳಿ ತೆಗೆಯಿರಿ.

b) ಪೂರ್ವಭಾವಿ ವೆಚ್ಚವನ್ನು $1/3$ ನೇ ಭಾಗ ತೊಡೆದು ಹಾಕಿ.

c) ಕಾಯ್ದಿಟ್ಟ ನಿಧಿಗೆ ₹ 10,000 ವರ್ಗಾಯಿಸಿರಿ.

d) ಪ್ರಸಕ್ತ ವರ್ಷ ಶೇ. 10 ರಂತೆ ಲಾಭಾಂಶ ಘೋಷಣೆ ಮಾಡಿ.

e) ಅಂತಿಮ ದಾಸ್ತಾನು ಶಿಲ್ಕು ₹ 1,25,000.

**ತಯಾರಿಸಿ:**

i) ಆದಾಯ ಪಟ್ಟಿ 31-3-2014 ರ ಅಂತ್ಯಕ್ಕೆ ಮತ್ತು

ii) ಸ್ಥಿತಿಗತಿ ಪಟ್ಟಿ.

23. ನಾರಾಯಣ ಇಂಡಸ್ಟ್ರೀಸ್ ನಿಯಮಿತ, ಅವರ ಈ ಕೆಳಕಂಡ ಆಸ್ತಿ ಜವಾಬ್ದಾರಿ ಪಟ್ಟಿಯ ಸಹಾಯದಿಂದ 31-3-2011 ಆಧಾರ ವರ್ಷವಾಗಿ ಶೇಕಡಾವಾರು ಏರಿಳಿತ ಪ್ರಮಾಣವನ್ನು ಕಂಡುಹಿಡಿಯಿರಿ :

| ವಿವರಣೆ | 31-3-2011 | 31-3-2012 | 31-3-2013 |
|---|---|---|---|
| | ₹ | ₹ | ₹ |
| ಶೇರು ಬಂಡವಾಳ | 1,00,000 | 1,25,000 | 1,50,000 |
| ಕಾಯ್ದಿರಿಸಿದ ನಿಧಿ | 50,000 | 75,000 | 75,000 |
| ಸಾಲಗಳು | 1,00,000 | 50,000 | 25,000 |
| ಧನಿಗಳು | 1,50,000 | 2,00,000 | 1,00,000 |
| ಕಟ್ಟಡ | 1,00,000 | 1,25,000 | 1,50,000 |
| ಯಂತ್ರಸ್ಥಾವರ | 1,00,000 | 1,25,000 | 50,000 |
| ಸರಕು | 1,25,000 | 1,25,000 | 75,000 |
| ಋಣಿಗಳು | 50,000 | 50,000 | 50,000 |
| ಬ್ಯಾಂಕಿನ ನಗದು | 25,000 | 25,000 | 25,000 |

24. ಈ ಕೆಳಗಿನ ಅಢಾವೆ ಪತ್ರಿಕೆ ಮತ್ತು ಸ್ವೀಕೃತಿ ಮತ್ತು ಪಾವತಿ ಖಾತೆಯು, ಬೆಂಗಳೂರು ಶಿಕ್ಷಣ ಸಂಸ್ಥೆ ಇವರಿಗೆ ಸಂಬಂಧಿಸಿದೆ :

**ಅಢಾವೆ ಪತ್ರಿಕೆ 31-3-2013**

| ಜವಾಬ್ದಾರಿಗಳು | ₹ | ಆಸ್ತಿಗಳು | ₹ |
|---|---|---|---|
| ಬಾಕಿ ಸಂಬಳ | 5,000 | ಬ್ಯಾಂಕಿನ ನಗದು | 22,000 |
| ಕಟ್ಟಡ ನಿಧಿ | 50,000 | ಪುಸ್ತಕಗಳು | 25,000 |
| ಬಂಡವಾಳ ನಿಧಿ | 72,500 | ಪೀಠೋಪಕರಣ | 30,000 |
| | | ಕಟ್ಟಡಗಳು | 50,000 |
| | | ಬಾಕಿ ವಂತಿಗೆ | 500 |
| | **1,27,500** | | **1,27,500** |

### 31-3-2014 ಕ್ಕೆ ಅಂತ್ಯವಾಗುವ ಸ್ವೀಕೃತಿ ಮತ್ತು ಪಾವತಿ ಖಾತೆ

| ಸ್ವೀಕೃತಿ | ₹ | ಪಾವತಿ | ₹ |
|---|---|---|---|
| ಗೆ ಆರಂಭಿಕ ಶಿಲ್ಕು | 22,000 | ಯಿಂದ ಸಂಬಳಗಳು | 20,000 |
| " ವಂತಿಗೆಗಳು | 18,800 | " ಮುದ್ರಣ ಮತ್ತು ಲೇಖನಿ | 2,000 |
| " ಪ್ರವೇಶ ಶುಲ್ಕ | 10,000 | " ಕಛೇರಿ ವೆಚ್ಚ | 4,000 |
| " ಹಳೆ ದಿನಪತ್ರಿಕೆ ಮಾರಾಟ | 200 | " ಪುಸ್ತಕ ಖರೀದಿ (1-4-2013) | 5,000 |
| | | " ದಿನಪತ್ರಿಕೆ ವಂತಿಗೆ | 500 |
| | | " ಲಘು ಉಪಹಾರ ವೆಚ್ಚಗಳು | 600 |
| | | " ಇ-ಮೇಲ್ ಖರ್ಚು | 200 |
| | | " ಅಂತಿಮ ಶಿಲ್ಕು | 18,700 |
| | **51,000** | | **51,000** |

**ಹೊಂದಾಣಿಕೆಗಳು:**

a) ಬಾಕಿ ವಂತಿಗೆ ದಿ: 31-3-2014 ರಂದು ₹ 5,000.

b) ಬಾಕಿ ಸಂಬಳ ದಿ: 31-3-2014 ರಂದು ₹ 600.

c) ಅರ್ಧದಷ್ಟು ಪ್ರವೇಶ ಶುಲ್ಕವನ್ನು ಬಂಡವಾಳೀಕರಿಸಿ.

d) ಪೀಠೋಪಕರಣ ಶೇ. 10 ರಂತೆ ಮತ್ತು ಪುಸ್ತಕಗಳಿಗೆ ಶೇ. 30 ರಂತೆ ಸವಕಳಿ ತೆಗೆಯಿರಿ.

31-3-2014 ರ ಅಂತ್ಯಕ್ಕೆ ತಯಾರಿಸಿ :

i) ಆದಾಯ ಮತ್ತು ವೆಚ್ಚ ಖಾತೆ

ii) ಆಢಾವೆ ಪತ್ರಿಕೆ.

## ಭಾಗ - ಡಿ
## (ಪ್ರಾಯೋಗಿಕ ಪ್ರಶ್ನೆಗಳು)

ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಐದು** ಅಂಕಗಳು : **(2×5=10)**

25. ಪಾಲುಗಾರಿಕೆ ಒಪ್ಪಂದದ ಅನುಪಸ್ಥಿತಿಯಲ್ಲಿ ಈ ಕೆಳಗಿನವುಗಳನ್ನು ಯಾವ ರೀತಿ ಪರಿಗಣಿಸುವಿರಿ ?

    a) ಬಂಡವಾಳದ ಮೇಲೆ ಬಡ್ಡಿ

    b) ಸ್ವಂತ ವೆಚ್ಚದ ಮೇಲಿನ ಬಡ್ಡಿ

    c) ಮುಂಗಡ ಸಾಲದ ಮೇಲಿನ ಬಡ್ಡಿ

    d) ಲಾಭ-ನಷ್ಟದ ಹಂಚಿಕೆ

    e) ಪಾಲುಗಾರನ ಸಂಬಳ.

26. ಸಂಯುಕ್ತ ಬಂಡವಾಳ ಕಂಪನಿಯ ಲಂಬ ಆಢಾವೆ ಪತ್ರಿಕೆಯ ನಮೂನೆಯನ್ನು ಬರೆಯಿರಿ.

27. ಶ್ರೇಣಿ ಆಧಾರಿತ ಡಾಟಾಬೇಸ್ ಮಾದರಿಯ ವೃಕ್ಷ (ಟ್ರೀಯನ್ನು) ತಯಾರಿಸಿ.

## (English Version)

### SECTION – A

Answer **any seven** questions, **each** question carries **two** marks. **(7×2=14)**

1. State any two causes of Depreciation.
2. What is meant by fixed capital system ?
3. What is Sacrifice Ratio ?
4. Mention any two modes of payment on settlement to Retiring partner.
5. Give the journal entry to close partners loan account on Dissolution of Firm.
6. What is over subscription ?
7. Give the meaning of Interim Dividend.
8. State any two uses of Financial Statement Analysis.
9. What are Non-profit organisations ?
10. State any two disadvantages of Data Base Management System.

### SECTION – B

Answer **any four** questions, **each** question carries **five** marks. **(4×5=20)**

11. Pratham and Chethan are partners sharing profits and losses in the ratio of 3 : 2. On 1-4-2013 they had capitals of ₹ 60,000 and ₹ 40,000 respectively.

    According to their partnership deed they are entitled to the following :

    a) Interest on capital at 6% p.a.
    b) Interest on Drawings at 5% p.a.
    c) Chethan is allowed a salary of ₹ 500 p.m. for first 6 months and for the remaining period ₹ 1,000 p.m.
    d) Their drawings during the year Pratham ₹ 8,000 and Chethan ₹ 10,000. Interest on the same ₹ 400 and ₹ 500 respectively.

    The profits for the year before making the above adjustments was ₹ 24,100.

    Prepare profit and loss appropriation A/c for the year ending 31-3-2014.

12. Ramesh and Suresh are partners sharing profits and losses in the ratio of 3 : 2. They admit Satish into partnership for $^1/_5$ th share.

    Calculate the new profit sharing ratio of all the partner's.

13. Anil, Sunil and Rahul are the partners sharing profits and losses in the ratio of 3 : 2 : 1. Their capitals as on 1-4-2014 were ₹ 70,000, ₹ 90,000 and ₹ 60,000 respectively.

    Anil died on 31-12-2014 and the partnership deed provided the following :

    a) Interest on Anil's capital at 8% p.a.

    b) Anil's salary ₹ 2,000 p.m.

    c) His share of accrued profit upto the date of death based on previous year's profit. Firm's profit for 2013-2014 ₹ 24,000

    d) His share of Goodwill ₹ 12,000

    Ascertain the amount payable to Anil's executor by preparing Anil's Capital A/c.

14. Kaveri Co. Ltd. issued 5000 5% Debentures at ₹ 250 each, at a discount of ₹ 50 per debenture payable as follows.

    ₹ 50 on Application

    ₹ 100 on Allotment

    ₹ 50 on first and final call

    All the debentures were subscribed and the money duely received upto the stage of allotment.

    Pass the Journal entries related to the above information.

15. Karnataka Co. Ltd. had the following on 31-3-2014 :

    | | |
    |---|---|
    | Current Assets | ₹ 2,40,000 |
    | Current liabilities | ₹ 60,000 |
    | Quick Assets | ₹ 1,20,000 |

    **Calculate :**

    i) Current Ratio ii) Quick Ratio.

16. From the following ledger balances prepare Receipts and Payments A/c of Bharani Charitable Trust.

| | ₹ | | ₹ |
|---|---|---|---|
| Cash in hand | 6,000 | Subscriptions Received | 12,000 |
| Periodicals cost | 600 | Rent paid | 5,000 |
| Furniture bought | 19,000 | Salary paid | 4,000 |
| Legacies received | 18,000 | Electricity Charges | 800 |
| Postage | 200 | | |

17. Explain the stages of data processing cycle.

## SECTION – C

Answer **any four** questions, **each** question carries **fourteen** marks. **(4×14=56)**

18. Following are the particulars related to Pushpak Co. Ltd, prepare machinery A/c and depreciation A/c for four years, charging depreciation at 10% p.a. on 31st March every year under straight line method.

    a) Machine "X" purchased on 1-4-2009 at ₹ 50,000 and spent further cost of ₹ 10,000 for installation.

    b) Machine "Y" purchased on 30-6-2010 at a cost of ₹ 40,000.

    c) Machine "X" sold on 30-9-2011 for ₹ 42,400.

19. Srikanth, Girish and Manju are partners sharing profits and losses equally. Their balance sheet as on 31-3-2014 was as follows :

**Balance Sheet as on 31-3-2014**

| Liabilities | | ₹ | Assets | ₹ |
|---|---|---|---|---|
| Creditors | | 30,000 | Cash | 24,000 |
| Bills payable | | 20,000 | Bills receivables | 28,000 |
| Bank overdraft | | 25,000 | Stock | 36,000 |
| Reserve fund | | 15,000 | Investments | 9,000 |
| **Capitals** | | | Debtors | 20,000 |
| Srikanth | 60,000 | | Furniture | 25,000 |
| Girish | 50,000 | | Machinery | 32,000 |
| Manju | 30,000 | 1,40,000 | Buildings | 50,000 |
| | | | Profit-loss A/c | 6,000 |
| | | **2,30,000** | | **2,30,000** |

Manju retired on 1-4-2014 from the business and the following adjustments are to be made.

a) Goodwill of the firm is created ₹ 18,000 (Retain in the business).

b) Maintain provision for doubtful debts at 5% on Debtors.

c) Increase stock by ₹ 4,000.

d) Depreciate Machinery and Furniture by 10% each.

**Prepare :**

i) Revaluation A/c  ii) Goodwill A/c

iii) All the partner's capital A/c  iv) Balance Sheet as on 1-4-2014.

20. Girija and Sudha are partners sharing profits and losses in the ratio of 3 : 2. They dissolved their firm on 31-3-2014.

**Balance Sheet as on 31-3-2014**

| Liabilities | | ₹ | Assets | | ₹ |
|---|---|---|---|---|---|
| Creditors | | 20,000 | Bank | | 15,000 |
| Bills payable | | 17,000 | Debtors | 25,000 | |
| Girija's Loan | | 21,000 | – Provision | 1,000 | 24,000 |
| Reserve Fund | | 10,000 | Investments | | 10,000 |
| P/L A/c | | 12,000 | Stock | | 14,000 |
| **Capitals :** | | | Furniture | | 16,000 |
| Girija | 44,000 | | Motor car | | 30,000 |
| Sudha | 40,000 | 84,000 | Computer | | 25,000 |
| | | | Buildings | | 30,000 |
| | | **1,64,000** | | | **1,64,000** |

The details available are :

a) Assets realised as follows :

| | |
|---|---|
| Debtors | ₹ 22,000 |
| Stock | ₹ 16,000 |
| Furniture | ₹ 14,000 |
| Motor car | ₹ 25,000 |
| Buildings | ₹ 40,000 |

b) Investment is taken over by Girija at Book value.

c) Computer is taken over by Sudha at 10% less.

d) All liabilities are paid in full.

e) Realisation on Expenses ₹ 2,500.

**Prepare :**

i) Realisation A/c

ii) Partners capital A/c

iii) Bank A/c.

21. Varsha Co. Ltd. issued 10,000 Preference Shares at ₹ 100 each at a premium of ₹ 5 per share payable as follows :

₹ 10 on Application

₹ 45 on Allotment (including premium)

₹ 30 on First call

₹ 20 on Final call

All the shares were subscribed and the money duely received except on final call for 500 shares. The Directors forfeited these shares and re-issued at ₹ 90 each fully paid.

Pass the necessary Journal Entries related to the above information.

22. Following is the Trial Balance of Kumar Co. Ltd., Davanagere, as on 31-3-2014.

**Trial Balance as on 31-3-2014**

| Sl. No. | Name of Accounts | Debit ₹ | Credit ₹ |
|---|---|---|---|
| 1 | Share capital 10000 Eq. Shares of Rs. 10 each | – | 1,00,000 |
| 2 | Stock on 1-4-2013 | 75,000 | – |
| 3 | Purchases/Sales | 1,05,000 | 2,30,000 |
| 4 | Returns | 10,000 | 5,000 |
| 5 | Wages | 15,000 | – |
| 6 | Salaries | 20,000 | – |
| 7 | Gas and Water | 9,000 | – |
| 8 | Sundry Expenses | 1,000 | – |
| 9 | Preliminary Expenses | 12,000 | – |
| 10 | Commission | 6,000 | 5,000 |
| 11 | Debtors/Creditors | 30,000 | 20,000 |
| 12 | Goodwill | 25,000 | – |
| 13 | Furniture | 10,000 | – |
| 14 | Plant and Machinery | 40,000 | – |
| 15 | Buildings | 50,000 | – |
| 16 | P/L Appropriation A/c | – | 24,500 |
| 17 | Reserve Fund | – | 24,000 |
| 18 | Bad Debts | 2,000 | – |
| 19 | Investments | 25,000 | – |
| 20 | Interest on Investment | – | 1,500 |
| 21 | Cash at Bank | 20,000 | – |
| 22 | 10% Debentures | – | 50,000 |
| 23 | Interest on Debentures | 5,000 | – |
| | | **4,60,000** | **4,60,000** |

**Adjustments :**

a) Depreciate buildings at 10%

b) Write off $\frac{1}{3}$ of preliminary Expenses

c) Transfer ₹ 10,000 to Reserve Fund

d) Dividend declared at 10% for the current year

e) Closing Stock ₹ 1,25,000.

**Prepare :**

i) Income Statement for the year ending 31-3-2014.

ii) Position statement.

23. From the following Balance Sheets of Narayan Industries Ltd., compute the trend percentage using 31-3-2011 as the base year.

| **Particulars** | **31-3-2011** | **31-3-2012** | **31-3-2013** |
|---|---|---|---|
| | ₹ | ₹ | ₹ |
| Share Capital | 1,00,000 | 1,25,000 | 1,50,000 |
| Reserves | 50,000 | 75,000 | 75,000 |
| Loans | 1,00,000 | 50,000 | 25,000 |
| Creditors | 1,50,000 | 2,00,000 | 1,00,000 |
| Buildings | 1,00,000 | 1,25,000 | 1,50,000 |
| Plant and Machinery | 1,00,000 | 1,25,000 | 50,000 |
| Stock | 1,25,000 | 1,25,000 | 75,000 |
| Debtors | 50,000 | 50,000 | 50,000 |
| Cash at Bank | 25,000 | 25,000 | 25,000 |

24. Following is the Balance Sheet and Receipts and Payments Account of Bengaluru Education Society.

**Balance Sheet as on 31-3-2013**

| **Liabilities** | ₹ | **Assets** | ₹ |
|---|---|---|---|
| O/S Salaries | 5,000 | Cash at Bank | 22,000 |
| Building Fund | 50,000 | Books | 25,000 |
| Capital Fund | 72,500 | Furniture | 30,000 |
| | | Buildings | 50,000 |
| | | O/S Subscription | 500 |
| | **1,27,500** | | **1,27,500** |